# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 407(584)
ಸದಸ್ಯರ ಹೆಸರು : **ಶ್ರೀ ಕೆ.ಅಬ್ದುಲ್ ಜಬ್ಬರ್**
ಉತ್ತರಿಸುವ ದಿನಾಂಕ : 08.12.2023
ಉತ್ತರಿಸುವ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿರುವ ಹಣ ಎಷ್ಟು; ಬಿಡುಗಡೆ ಮಾಡಿರುವ ಅನುದಾನದಲ್ಲಿ ಬಳಕೆಯಾಗಿರುವ ಹಾಗೂ ಬಾಕಿ ಇರುವ ಹಣ ಎಷ್ಟು.</td><td>ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಬಿಡುಗಡೆ ಮಾಡಿರುವ ಅನುದಾನ, ಖರ್ಚಾದ ಅನುದಾನ ಮತ್ತು ಬಾಕಿ ಉಳಿದ ಅನುದಾನದ ವಿವರ ಈ ಕೆಳಗಿನಂತಿದೆ.<br><br>(ರೂ.ಕೋಟಿಗಳಲ್ಲಿ)<br>
<table>
<tr><th>ಕ್ರ.ಸಂ</th><th>ಆರ್ಥಿಕ ವರ್ಷ</th><th>ಸರ್ಕಾರದಿಂದ ಮಂಡಳಿಗೆ ಬಿಡುಗಡೆಯಾದ ಅನುದಾನ</th><th>ಖರ್ಚಾದ ಅನುದಾನದ ಮೊತ್ತ(ಆರಂಭಿಕ ಶಿಲ್ಕು ಸೇರಿ)</th><th>ಬಾಕಿ ಉಳಿದ ಮೊತ್ತ</th></tr>
<tr><td>1</td><td>2019-20</td><td>1125.00</td><td>1246.81</td><td>329.53</td></tr>
<tr><td>2</td><td>2020-21</td><td>1031.86</td><td>925.81</td><td>413.44</td></tr>
<tr><td>3</td><td>2021-22</td><td>1492.97</td><td>1129.7</td><td>7833.59</td></tr>
<tr><td>4</td><td>2022-23</td><td>2900</td><td>1584.3</td><td>2113.8</td></tr>
</table></td></tr>
<tr><td>ಆ)</td><td>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹಣ ದುರ್ಬಳಕೆಯಲ್ಲಿ ಭಾಗಿಯಾದವರ ವಿರುದ್ಧ ಕ್ರಮಕೈಗೊಂಡು ಅವರಿಂದ ವಸೂಲಿ ಮಾಡಲಾಗುವುದೇ; (ಸ್ಪಷ್ಟ ವಿವರ ನೀಡುವುದು)</td><td>-ಹೌದು ಬಂದಿದೆ-<br><br>ಮಹಾಲೇಖಪಾಲರು ಲೆಕ್ಕಪರಿಶೋಧನೆ ಹಾಗೂ ಸ್ಥಳ ಪರಿಶೀಲನೆ ನಡೆಸಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಆರ್.ಎಚ್-05 ಕ್ಯಾಂಪ್ ನಲ್ಲಿ ಕೈಗೊಂಡಿರುವ ಅಂದಾಜು ಮೊತ್ತ ರೂ.1.02 ವೆಚ್ಚದ ಸೀಮೆಂಟ್ ಕಾಂಕ್ರೇಟ್ ರಸ್ತೆ ನಿರ್ಮಾಣ ಕಾಮಗಾರಿಯು ಕಳಪೆಯಾಗಿರುವ ಬಗ್ಗೆ ವರದಿ ಮಾಡಿದ್ದು, ಸದರಿ ವರದಿಯ ಕುರಿತು ಪರಿಶೀಲನೆ ಕೈಗೊಂಡಿದ್ದು, ಕಳಪೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವವರ ಬಗ್ಗೆ AG ವರದಿ ಆಧರಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ಮಂಡಳಿಯು ಸದರಿ ಕಾಮಗಾರಿಗೆ ಪೂರ್ಣ ಹಣ ಪಾವತಿಸುವುದನ್ನು ತಡೆ ಹಿಡಿದು ನಿಯಮಾನುಸಾರ ಕ್ರಮಕೈಗೊಳ್ಳುವ ಪ್ರಕ್ರಿಯೆ ಪ್ರಾರಂಭಿಸಿರುತ್ತಾರೆ. ಅಲ್ಲದೆ ಕಲಬುರಗಿ ಉತ್ಸವಕ್ಕೆ ಮಂಡಳಿಯ ಅನುದಾನ ವೆಚ್ಚವಾಗಿರುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲನೆ ನಡೆಸಿದ್ದು, ಸ್ವೀಕೃತ ವರದಿಯ ಮೇಲೆ ಕ್ರಮ</td></tr>
</table>

| | | |
|---|---|---|
| | | ವಹಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ. ಮಂಡಳಿಯಲ್ಲಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸ್ವೀಕೃತವಾಗುವ ದೂರುಗಳನ್ನು ಪರಿಶೀಲಿಸಲು ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ 02 **" ದೂರು ನಿರ್ವಹಣಾ ಸಮಿತಿಗಳನ್ನು "**ರಚಿಸಲಾಗಿದೆ.<br>ಸದರಿ ಸಮಿತಿಯು ದೂರು ಸ್ವೀಕೃತವಾದ ನಂತರ ಸ್ಥಳ ಪರಿಶೀಲನೆ ಕೈಗೊಂಡು ಗುಣ ಭರವಸೆ ಪರೀಕ್ಷೆಗಳ ವರದಿ ಹಾಗೂ ಇತರೆ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಸಮಗ್ರ ವರದಿಯನ್ನು ಮಂಡಳಿಗೆ ಸಲ್ಲಿಸಲಾಗುತ್ತಿದೆ. ಸದರಿ ವರದಿಯಲ್ಲಿ ಅವ್ಯವಹಾರವಾದ ಬಗ್ಗೆ ದೃಢಪಟ್ಟಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |
| **ಇ)** | ಕಳೆದ ನಾಲ್ಕು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡ ಕಾಮಗಾರಿಗಳು ಹಾಗೂ ಟೆಂಡರ್‌ಗಳ ಬಗ್ಗೆ ಪೂರ್ಣ ವಿವರವನ್ನು ನೀಡುವುದು; | ಕಳೆದ ನಾಲ್ಕು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡ ಕಾಮಗಾರಿಗಳ ಹಾಗೂ ಟೆಂಡರ್‌ಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| **ಈ)** | ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಲ್ಲಿ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಹಾಗೂ ಪಾರದರ್ಶಕತೆಯನ್ನು ತರಲು ಸರ್ಕಾರ ಕ್ರಮವಹಿಸುವುದೇ; ಮಂಡಳಿಯ ವೆಬ್ ಸೈಟ್‌ನ್ನು ನವೀಕೃತಗೊಳಿಸಿ ಕಾಮಗಾರಿ ಸೇರಿದಂತೆ ಮಂಡಳಿಯ ಮಾಹಿತಿ ಹಾಗೂ ಎಲ್ಲಾ ಪ್ರಕ್ರಿಯೆಯನ್ನು KKRDB.kar.nic.inನಲ್ಲಿ ಅಳವಡಿಸಲಾಗುವುದೇ?(ವಿವರ ನೀಡುವುದು) | -ಹೌದು-<br><br>ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವೆಬ್ ಸೈಟ್ (HYKASOFT) ಇದ್ದು ನವೀಕರಣ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |

ಸಂಖ್ಯೆ: ಪಿಡಿಎಸ್ 210 ಹೆಚ್ ಕೆಡಿ 2023

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 407(584)ರ ಅನುಬಂಧ

## ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡ ಕಾಮಗಾರಿಗಳ ವಿವರ

| 2018-19 to 2022-23 ABSTRACT<br>as on 29.11.2023 | | | | |
|---|---|---|---|---|
| Plan Year | No. of Works | Completed | Under Progress | Not Started |
| 2019-20 | 4050 | 3825 | 189 | 36 |
| 2020-21 | 2286 | 1840 | 388 | 58 |
| 2021-22 | 2242 | 1479 | 698 | 65 |
| 2022-23 | 3494 | 769 | 1823 | 902 |
| **Total** | **12072** | **7913** | **3098** | **1061** |

## ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡ ಟೆಂಡರ್‌ಗಳ ಬಗ್ಗೆ ಪೂರ್ಣ ವಿವರ.

| Plan Year | No. of Tender Approved Works | Tender Approved Amount (Rs.in Lakhs) |
|---|---|---|
| 2019-20 | 3472 | 124634.29 |
| 2020-21 | 1582 | 101549.095 |
| 2021-22 | 1309 | 120031.664 |
| 2022-23 | 1957 | 159053.585 |
| **TOTAL** | **8320** | **505268.634** |